**<u>ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ ಪೊನ್ನಂಪೇಟೆ.</u>**

**<u>ಕ್ರಿ.ಮೊ.ಸಂಖ್ಯೆ:176/2022</u>**

**ಪಿರ್ಯಾದಿ** : ಶ್ರೀಮತಿ ಸಬಿತಾ ಐ.ಪಿ,
ಗಂಡಃ ಪೌತಿ ಇಟಿರ ಪೊನ್ನಪ್ಪ,
ಪ್ರಾಯ 54 ವರ್ಷ
ವಾಸಃ ಸಂತ ಅಂಥೋನಿ ಕಾನ್ವೆಂಟ್ ಸ್ಕೂಲ್,
ಹುದಿಕೇರಿ ರಸ್ತೆ, ಪೊನ್ನಂಪೇಟೆ ಟೌನ್,
ಪೊನ್ನಂಪೇಟೆ ತಾಲ್ಲುಕು, ಕೊಡಗು.

**ವಿರುದ್ಧ**

**ಆರೋಪಿ** : ಶ್ರೀಮತಿ ಕೆ.ಪಿ.ಶಿವಮ್ಮ,
ಗಂಡಃ ಕೆ.ಕೆ.ಪ್ರಕಾಶ್,
ಪ್ರಾಯಃ 32 ವರ್ಷ,
ವಾಸಃ ಎಮ್.ಜಿ.ನಗರ, ಹಳ್ಳಿಗಟ್ಟು ಗ್ರಾಮ,
ಪೊನ್ನಂಪೇಟೆ ಟೌನ್, ಪೊನ್ನಂಪೇಟೆ ತಾಲ್ಲೂಕು,
ಕೊಡಗು.

**<u>ದಂಡ ಸಂಹಿತೆ ಪ್ರಕ್ರಿಯೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ</u>**

**<u>ಪ್ರಶ್ನೆ ಸಂಖ್ಯೆ-1:</u>** ಪಿರ್ಯಾದಿಯ ಪರ ಇದುವರೆಗೂ ನುಡಿದ ಎಲ್ಲಾ ಸಾಕ್ಷ್ಯಗಳನ್ನು ಆಲಿಸಿದ್ದೀರಾ?

ಉಃ ಔದು

**<u>ಪ್ರಶ್ನೆ ಸಂಖ್ಯೆ-2:</u>** ಪ್ರಾ.ಸಾಃ1 ಶ್ರೀಮತಿ ಸಬಿತಾ ಐ.ಪಿ, ಪಿರ್ಯಾದುದಾರರು, ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಆರೋಪಿಯಾದ ನೀವು ತಮ್ಮ ಆರ್ಥಿಕ ಅಗತ್ಯತೆಗಾಗಿ ದಿಃ10.07.2019 ರಂದು ಕೈ ಸಾಲವಾಗಿ ರೂ.20,00,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ದಿಃ10.11.2020 ರಂದು ಸದರಿ ಸಾಲಕ್ಕೆ ಸಂಬಂಧ ಪಟ್ಟಂತೆ ಒಪ್ಪಂದ ಪತ್ರವನ್ನು ಮಾಡಿಕೊಂಡಿದ್ದು, ನಂತರ ಪಿರ್ಯಾದಿಯವರು ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ದಿಃ05.12.2021 ರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪೊನ್ನಂಪೇಟೆ ಶಾಖೆಯ ನಿಮ್ಮ ಖಾತೆಯ 958486 ನಂಬರಿನ ಚೆಕ್ ಅನ್ನು ಸಾಲದ ಭಾದ್ಯತೆಗಾಗಿ ನೀಡಿದ್ದು, ನಂತರ ಪಿರ್ಯಾದಿಯವರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ತಮ್ಮ ಬ್ಯಾಂಕ್ ಶಾಖೆಗೆ ಹಾಜರುಪಡಿಸಿದ್ದು, ಅವರು ದಿಃ29.12.2021 ರಂದು ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹವನ್ನು ನೀಡಿರುತ್ತಾರೆ. ನಂತರ ಪಿರ್ಯಾದಿಯವರು ತಮ್ಮ ವಕೀಲರ ಮೂಲಕ ದಿಃ10.01.2022 ರಂದು 15 ದಿನಗಳೊಳಗೆ ಚೆಕ್ ನ ಹಣವನ್ನು ಹಿಂತಿರುಗಿಸುವಂತೆ ಕಾನೂನು ರೀತಿಯಲ್ಲಿ ನೋಟೀಸನ್ನು ನೀಡಿದ್ದರೂ ಸಹ ಆರೋಪಿಯಾದ ನೀವು ಚೆಕ್‌ನ ಹಣವನ್ನು ಹಿಂಡಿರುಗಿಸದೇ ಇರುವ ಕಾರಣ ಅವರು ನಿಮ್ಮ ವಿರುದ್ಧ

ದೂರನ್ನು ನೀಡಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಮತ್ತು ಸಾಕ್ಷಿಯು ನಿ.ಪಿ.1 ಚೆಕ್ಕನ್ನು, ನಿ.ಪಿ.2 ಬ್ಯಾಂಕ್ ಹಿಂಬರಹವನ್ನು, ನಿ.ಪಿ.3 ವಕೀಲರ ಮೂಲಕ ನೀಡಿದ ನೋಟೀಸನ್ನು, ನಿ.ಪಿ.5 ಮತ್ತು 6 ಅಂಚೆ ರಸೀತಿಯನ್ನು, ನಿ.ಪಿ.7 ಮತ್ತು 8 ಅಂಚೆ ಸ್ವೀಕೃತಿಯನ್ನು ಮತ್ತು ನಿ.ಪಿ.9 ಒಪ್ಪಂದ ಪತ್ರವನ್ನು, ನಿ.ಪಿ.10 ಶುದ್ಧ ಕ್ರಯ ಪತ್ರವನ್ನು, ನಿ.ಪಿ.11ರಿಂದ 13 ಪಹಣಿಗಳನ್ನು, ನಿ.ಪಿ.14 ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು, ನಿ.ಪಿ.15 ರಿಂದ 17 ಬಾಡಿಗೆ ಕರಾರು ಪತ್ರಗಳನ್ನು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

**ಪ್ರಶ್ನೆ ಸಂಖ್ಯೆ-3:** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ

**ಪ್ರಶ್ನೆ ಸಂಖ್ಯೆ-4** ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತನು ನೀಡಿದ ಉತ್ತರಗಳನ್ನು ದಿಃ09.10.2025 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

ಸ್ಥಳಃ ಪೊನ್ನಂಪೇಟೆ,
ದಿನಾಂಕಃ 09.10.2025

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಪೊನ್ನಂಪೇಟೆ.

On perusal of records, the accused alleged to have committed offences P/U/Sec.138 of N.I Act. The above alleged offence against accused is bailable in nature and the same is triable by this court. Insufficient Funds and Dormant Account